4008/5061/6025/7025

Second Semester (3 Year) LL.B./V Semester 5 Year B.A.LL.B.
(Maj. – Min.)/B.B.A.LL.B./B.Com.LL.B. Examination, March/April 2021

# CONTRACT – II

## (Specific Contracts)

Duration : 3 Hours — Max. Marks : 80

**Instructions :** **1. Answer any five questions from group (a) each question carries 10 marks.**

**2. Answer any five questions from group (b) each question carries 06 marks.**

**3. Answers should be written either in English or Kannada completely.**

Q. No. 1. (a) Explain the rights of the Surety. Marks : 10

ಜಾಮೀನುದಾರನ ಹಕ್ಕುಗಳನ್ನು ವಿವರಿಸಿರಿ.

Q. No. 1. (b) Write a short note on 'Rights of Indemnity - holder'. Marks : 6

ನಷ್ಟ ಪರಿಹಾರ ಪಡೆಯುವವನ ಹಕ್ಕುಗಳ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

Q. No. 2. (a) Define Guarantee and explain its features. Marks : 10

ಜಾಮೀನುದಾರಿಕೆಯನ್ನು ವ್ಯಾಖ್ಯಾನಿಸಿರಿ ಮತ್ತು ಅದರ ಲಕ್ಷಣಗಳನ್ನು ವಿವರಿಸಿರಿ.

Q. No. 2. (b) 'B' owes to 'C' a debt guaranteed by 'A'. The debt becomes payable. 'C' does not sue 'B' for a year after the debt has become payable. Is 'A' discharged from his suretyship ? Decide. Marks : 6

'ಬ' ನು 'ಕ'ನಿಗೆ ಕೊಡಬೇಕಾದ ಸಾಲಕ್ಕೆ 'ಅ'ನು ಜಾಮೀನುದಾರನಾಗಿರುತ್ತಾನೆ. ಆ ಸಾಲವನ್ನು ಮರುಪಾವತಿಸುವ ಸಮಯ ಬಂದಿರುತ್ತದೆ. ಆದರೆ ಆ ಸಾಲವನ್ನು ಮರುಪಾವತಿಸುವ ಸಮಯ ಬಂದು ಒಂದು ವರ್ಷವಾದರೂ 'ಕ'ನು 'ಬ'ನ ವಿರುದ್ಧ ದಾವೆಯನ್ನು ಹೂಡಿರುವುದಿಲ್ಲ. 'ಅ'ನು ತನ್ನ ಜಾಮೀನುದಾರಿಕೆಯ ಹೊಣೆಯಿಂದ ಮುಕ್ತನಾಗುತ್ತಾನೆಯೇ ? ನಿರ್ಣಯಿಸಿರಿ.

P.T.O.

Q. No. 3. (a) Explain the duties of a Bailee. Marks : 10

ನಿಕ್ಷೇಪಿತನ (ಸರಕು ಪಡೆದವನ) ಕರ್ತವ್ಯಗಳನ್ನು ವಿವರಿಸಿರಿ.

Q. No. 3. (b) Write a short note on 'Pledge'. Marks : 6

'ಒತ್ತೆ ಇಡುವಿಕೆ'ಯ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

Q. No. 4. (a) Define Lien. What are the Rights of a Bailee in respect of lien ? Marks : 10

ಧಾರಣಾಧಿಕಾರವನ್ನು ವ್ಯಾಖ್ಯಾನಿಸಿ ? ಧಾರಣಾಧಿಕಾರಕ್ಕೆ ಸಂಬಂಧಿಸಿದಂತೆ ನಿಕ್ಷೇಪಿತನ (ಸರಕು ಪಡೆದವನ) ಹಕ್ಕುಗಳಾವುವು ?

Q. No. 4. (b) 'A' finds a dog and makes a reasonable efforts to trace the true owner, but could not find him. Later 'A' sells that dog to 'B', who buys it without knowing that 'A' was merely a finder. Can the true owner recover the dog from 'B' ? Decide. Marks : 6

'ಅ' ನಿಗೆ ಒಂದು ನಾಯಿ ಸಿಗುತ್ತದೆ. ಅವನು ಆ ನಾಯಿಯ ಯಜಮಾನನನ್ನು ಹುಡುಕುವ ಸರಿಯಾದ ಪ್ರಯತ್ನ ಮಾಡಿದರೂ ಅದರ ಯಜಮಾನ ಸಿಗಲಿಲ್ಲ, ನಂತರ 'ಅ'ನು ಆ ನಾಯಿಯನ್ನು 'ಬ'ಗೆ ಮಾರುತ್ತಾನೆ. ನಾಯಿಯು 'ಅ' ನಿಗೆ ಸಿಕ್ಕಿದ್ದು ಎನ್ನುವ ಅರಿವಿಲ್ಲದೆ 'ಬ'ನು ಅದನ್ನು ಖರೀದಿಸುತ್ತಾನೆ. 'ಬ'ನಿಂದ ಆ ನಾಯಿಯನ್ನು ಅದರ ನಿಜವಾದ ಯಜಮಾನ ಮರಳಿ ಪಡೆಯಬಹುದೇ ? ನಿರ್ಣಯಿಸಿರಿ.

Q. No. 5. (a) Explain the different modes of creation of agency. Marks : 10

ಕಾರ್ಯಭಾರವನ್ನು ಸೃಷ್ಟಿಸುವ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 5. (b) Write a short note on 'Personal liability of agent'. Marks : 6

'ಕಾರ್ಯಭಾರಿಯ ವೈಯಕ್ತಿಕ ಹೊಣೆಗಾರಿಕೆ'ಯ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

Q. No. 6. (a) What is Agency ? What are the rights of an agent ? Marks : 10

ಕಾರ್ಯಭಾರ ಎಂದರೇನು ? ಒಬ್ಬ ಕಾರ್ಯಭಾರಿಯ ಹಕ್ಕುಗಳಾವುವು ?

Q. No. 6. (b) 'P' gives authority to 'A' to sell P's land and to pay himself, out of the proceeds, the debt due to him from 'P'. Subsequently 'P' revokes the authority given to 'A'. Can he do so ? Advise 'P'. Marks : 6

'ಪ' ಎನ್ನುವವನು ತನ್ನ ಜಮೀನನ್ನು ಮಾರಿ ಅದರಿಂದ ಬಂದ ಹಣದಲ್ಲಿ 'ಅ'ಗೆ ಕೊಡಬೇಕಾದ ಸಾಲಕ್ಕೆ ಜಮಾ ಮಾಡಿಕೊಳ್ಳುವಂತೆ 'ಅ'ಗೆ ಅಧಿಕಾರ ಕೊಡುತ್ತಾನೆ. ಅನಂತರ 'ಪ' ಯು 'ಅ' ನಿಗೆ ಕೊಟ್ಟ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾನೆ. ಅವನು ಹಾಗೆ ಮಾಡಬಹುದೇ ? 'ಪ'ಗೆ ಸಲಹೆಯನ್ನು ನೀಡಿರಿ.

Q. No. 7. (a) Explain the different modes of dissolution of partnership firm. Marks : 10
ಪಾಲುದಾರಿಕಾ ಸಂಸ್ಥೆಯ ವಿಸರ್ಜನೆಯ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 7. (b) Write a short note on Implied authority of a partner. Marks : 6
ಪಾಲುದಾರನೊಬ್ಬನ ಅವ್ಯಕ್ತ (ಸೂಚ್ಯ) ಅಧಿಕಾರದ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

Q. No. 8. (a) Explain the admission and retirement of partners in a partnership firm. Marks : 10
ಒಂದು ಪಾಲುದಾರಿಕಾ ಸಂಸ್ಥೆಯ ಪಾಲುದಾರರ ಪ್ರವೇಶ ಮತ್ತು ನಿವೃತ್ತಿಯ ಬಗ್ಗೆ ವಿವರಿಸಿರಿ.

Q. No. 8. (b) A and B, partners of a firm, admit 'M', a minor, as a partner. What are the consequences of this admission of a minor as a partner ? Decide. Marks : 6
ಒಂದು ಪಾಲುದಾರಿಕಾ ಸಂಸ್ಥೆಯ ಪಾಲುದಾರರಾದ 'ಅ' ಮತ್ತು 'ಬ', ಅಪ್ರಾಪ್ತ ವಯಸ್ಕನಾದ 'ಎಮ್'ನನ್ನು ತಮ್ಮ ಪಾಲುದಾರಿಕಾ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. ಅಪ್ರಾಪ್ತ ವಯಸ್ಕನನ್ನು ಪಾಲುದಾರನಾಗಿ ಇಲ್ಲಿ ಸೇರಿಸಿಕೊಂಡಿರುವುದರ ಪರಿಣಾಮಗಳು ಯಾವುವು ? ನಿರ್ಣಯಿಸಿರಿ.

Q. No. 9. (a) Explain implied conditions and warranties provided under the Sale of Goods Act. Marks : 10
ಸರಕು ಮಾರಾಟ ಅಧಿನಿಯಮದಡಿಯಲ್ಲಿ ಇರುವ ಅವ್ಯಕ್ತ (ಸೂಚ್ಯ) ಷರತ್ತುಗಳನ್ನು ಮತ್ತು ಭರವಸೆಗಳನ್ನು ವಿವರಿಸಿರಿ.

Q. No. 9. (b) Write a short note on 'Stoppage in transit'. Marks : 6
'ಸಾಗಾಣೆಯಲ್ಲಿ ನಿಲ್ಲಿಸುವಿಕೆ'ಯ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

Q. No. 10. (a) Define contract of sale and distinguish sale from an agreement to sell. Marks : 10
ಮಾರಾಟ ಕರಾರನ್ನು ವ್ಯಾಖ್ಯಾನಿಸಿರಿ ಮತ್ತು ಮಾರಾಟ ಹಾಗೂ ಮಾರಾಟಕ್ಕಾಗಿ ಒಪ್ಪಂದಗಳ ನಡುವೆ ವ್ಯತ್ಯಯಿಸಿರಿ.

Q. No. 10. (b) 'A' buys a diamond necklace from 'B' and pays for it, but leaves it in the possession of 'B'. 'B' sells the same necklace to 'C' for a higher price. Does 'C' acquire a better title in the necklace ? Can 'A' institute a suit against 'C' for recovery of the necklace ? Decide. Marks : 6
'ಅ'ನು 'ಬ'ನಿಂದ ಒಂದು ವಜ್ರದ ಕಂಠಹಾರವನ್ನು ಖರೀದಿ ಮಾಡಿ ಅದರ ಬೆಲೆಯನ್ನು ಪಾವತಿಸಿ ಅದನ್ನು 'ಬ'ನ ಸ್ವಾಧೀನದಲ್ಲಿಯೇ ಬಿಡುತ್ತಾನೆ. 'ಬ'ನು ಆ ಕಂಠಹಾರವನ್ನು 'ಕ' ನಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾನೆ. 'ಕ'ನು ಆ ಕಂಠಹಾರದಲ್ಲಿ ಉತ್ತಮ ಸ್ವಾಮಿತ್ವವನ್ನು ಹೊಂದಿರುತ್ತಾನೆಯೇ ? 'ಅ'ನು 'ಕ'ನ ವಿರುದ್ಧ ಆ ಕಂಠಹಾರವನ್ನು ಪಡೆಯಲು ದಾವೆಯನ್ನು ಹೂಡಬಹುದೇ ? ನಿರ್ಣಯಿಸಿರಿ.

---